SRI H. M. CHANNABASAPPA (Minister for Public Works and Electricity).—

(*a*) No.

(*b*) No.

(*c*) There have been no complaints from December 1971.

(*d*) Does not arise in view of reply to clause (c)

MESSAGE FROM THE GOVERNOR ANNOUNCEMENT

Madam SPEAKER—I have received a message from the Governor of Mysore which is as follows —

To,

The Members of the Legislative Assembly,

I have received with great satisfaction the expression of your thanks for the speech with which I opened the Budget Session 1973 of the Mysore Legislative Assembly.

MOHANLAL SUKHADIA
Governor of Mysore.

PRESENTATION OF THE BUDGET IN KANNADA

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) – ಮಾನ್ಯ ಅರ್ಥಸಚಿವರು ಆಯವ್ಯಯವನ್ನು ಮಂಡಿಸುವಾಗ ನಾನು ಮಾಡಿದ ಕೆಲವು ಸಲಹೆಗಳನ್ನು ಗಮನಿಸಬೇಕೆಂದು ಹಿಂದೆಯೇ ಒತ್ತಾಯ ಮಾಡಿದ್ದೇನೆ. ಕನ್ನಡದಲ್ಲಿ ಆಯವ್ಯಯವನ್ನು ಮಂಡಿಸಬೇಕು ಒಂದು ವೇಳೆ ಅದು ಇಂಗ್ಲೀಷಿನಲ್ಲಿ ಇದ್ದರೆ ದಯಮಾಡಿ ಅದನ್ನು ಕನ್ನಡದಲ್ಲಿ ಮಂಡಿಸಬೇಕು. ಮಂಡಿಸದಿದ್ದರೆ ನಿಮ್ಮ ಮೇಲೆ ಪ್ರತಿಭಟನೆ ಮಾಡುವ ಪಂಥಾದ್ದು ಆಗಬಾರದು ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಯ ಮಂತ್ರಿಗಳು)—ಒಂದು ಪ್ಯಾರ ಓದಿದರೆ ಸಾಕೇ?

ಶ್ರೀ ವಾಟಾಳ್ ನಾಗರಾಜ್—ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುತ್ತೇನೆ, ತಾವು ಕರ್ನಾಟಕದ ವಂಕಂಟು ಮಣಿಯಂತೆ ಇದ್ದೀರಿ. ನಿಮ್ಮನ್ನು ನಾನು ಮತ್ತೆ ಆ ರೀತಿ ಕರೆಯುತ್ತೇನೆ, ಬಹಳ ಸಂತೋಷದಿಂದ ಕರೆಯುತ್ತೇನೆ. ಆದರೂ ನನ್ನನ್ನು ತಾವು ಹೊರಕ್ಕೆ ಹಾಕಿಸುವುದನ್ನು ಬಿಡಬೇಡಿ. ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಶ್ರೀಮಾನ್ ಘೋರ್ಪಡೆಯವರು ಅಚ್ಚಕನ್ನಡದವರು. ಕನ್ನಡ ಬಲ್ಲವರು, ಕನ್ನಡವನ್ನು ಆಳವಾಗಿ ಅಭ್ಯಾಸ ಮಾಡಿರುವವರು, ಹೋದಸಾರಿ ಹೇಳಿದ್ದಾರೆ, ಮುಂದಿನ ಸಾಗಿ ಕನ್ನಡದಲ್ಲಿ ಮಂಡಿಸುತ್ತೇನೆಂದು ವಚನ ಕೊಟ್ಟಿದ್ದಾರೆ. ಆ ವಚನವನ್ನು ಭಂಗ ಮಾಡುವುದಾದರೆ ನಾವು ವಿಧಿಯಿಲ್ಲದೆ ವಿರೋಧ ಮಾಡಬೇಕಾಗುತ್ತದೆ ಎಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು—ಮಾನ್ಯ ಮಂತ್ರಿಗಳು ಓದಲು ಶುರು ಮಾಡುತ್ತಾರೆ ದಯಮಾಡಿ ಕೋ-ಆಪರೇಟ್ ಮಾಡಿ. ಒಬ್ಬೊಬ್ಬರಿಗೆ ಒಂದೊಂದು ಭಾಷೆಯಲ್ಲಿ ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ ದಯಮಾಡಿ ಕನ್ನಡದಲ್ಲಿ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ)—ಅವರು ಆಯವ್ಯಯ ಭಾಷಣ ಪ್ರಿಂಟ್ ಆಗಿರುವುದನ್ನು ಓದುವುದು ಅಷ್ಟೇ ಅಲ್ಲ, ಕನ್ನಡದಲ್ಲಿ ಸ್ಪಷ್ಟವಾಗಿ ಮಾತನಾಡುತ್ತಾರೆ, ಸ್ಪಷ್ಟವಾಗಿ ಓದುವುದಕ್ಕೆ ಬರುತ್ತದೆ. ಅಚ್ಚು ಮಾಡಿರುವ ಭಾಷಣ ಓದುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಇದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಬರತಕ್ಕ ಭಾಷೆ ಕನ್ನಡ ಅದರಲ್ಲಿ ಇವೊತ್ತು ಅವರು ಓದಬೇಕೆಂದು ಒತ್ತಾಯ ಮಾಡಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ (ಸಾಗರ)—ಹಿಂದೆ ಈ ಮಾನ್ಯ ಸಭೆಗೆ ಆಶ್ವಾಸನೆ ಕೊಟ್ಟಿದ್ದಾರೆ. ಮುಂದಿನ ಸಲ ಪೂರ್ತಿ ಕನ್ನಡದಲ್ಲಿ ಓದುತ್ತೇನೆ ಎಂದು ಅರ್ಥ ಮಂತ್ರಿಗಳು ಕೊಟ್ಟಂಥ ಆ ಮಾತನ್ನು ಇವತ್ತು ಈಡೇರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ—ಮೊದಲು ಕನ್ನಡದಲ್ಲಿ ಪ್ರಾರಂಭಮಾಡಿ ಅನಂತರ ಇಂಗ್ಲೀಷಿನಲ್ಲಿ ಓದುತ್ತೇನೆ.

ಅಧ್ಯಕ್ಷರು ಅದನ್ನು ಯಾರೂ ಬಲವಂತ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ—ರಾಜ್ಯಪಾಲರಿಗೆ ಸಂಪೂರ್ಣವಾಗಿ ಕನ್ನಡ ಬರದೆ ಇದ್ದರೂ ಮೊದಲನೇ ಪ್ಯಾರ ಮತ್ತು ಕೊನೆಯ ಪ್ಯಾರವನ್ನು ಕನ್ನಡದ ಅಭಿಮಾನದಿಂದ ಮತ್ತು ರಾಜ್ಯದ ಅಭಿಮಾನದಿಂದ ಕನ್ನಡದಲ್ಲಿ ಓದಿದ್ದಾರೆ ಕನ್ನಡ ಬರದೇ ಇದ್ದರೂ ಬಹಳ ಪ್ರಯತ್ನಪಟ್ಟು ತಮ್ಮ ಮೆಚ್ಚಿಗೆಯನ್ನು ಕನ್ನಡದಲ್ಲಿ ವ್ಯಕ್ತಮಾಡಿದರು. ಕನ್ನಡ ಬಲ್ಲವರು, ತಿಳಿದಂತಹವರು, ಕನ್ನಡನಾಡಿನ ಮಂತ್ರಿಗಳ ಇವೊತ್ತು ಕನ್ನಡದಲ್ಲಿ ಆಯವ್ಯಯವನು ಓದುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ ಸಹಿಸಿಕೊಳ್ಳಬೇಕು.

ಅಧ್ಯಕ್ಷರು—ರೂಲ್ಸ್‌ನಲ್ಲಿ ಇಲ್ಲ, ಇಂಥ ಭಾಷೆಯಲ್ಲಿಯೇ ಮಾತನಾಡಬೇಕು ಎಂದು ಬಲಾತ್ಕಾರ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್—ರೂಲ್ಸ್‌ನಲ್ಲಿಲ್ಲವೆನ್ನುವುದು ಗೊತ್ತಿದೆ. ಆದರೆ ರಾಜ್ಯಭಾಷೆಯ ಮೇಲೆ ಅಭಿಮಾನವಿದ್ದು ರಾಜ್ಯ ಸರ್ಕಾರ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಎಲ್ಲ ಮಟ್ಟದಲ್ಲಿಯೂ ಮಾಡುತ್ತೇವೆ ಎಂದು ಹೇಳುತ್ತಿರುವಾಗ ಮಾನ್ಯ ಘೋರ್ಪಡೆ ಅವರು ಕನ್ನಡದಲ್ಲಿ ಪ್ರಾರಂಭ ಮಾಡಿ ಇಂಗ್ಲೀಷಿನಲ್ಲಿ ಮುಂದುವರಿಸುತ್ತೇನೆ ಎನ್ನುವುದು ಕನ್ನಡಕ್ಕೆ ಅಗೌರವ ಮಾಡತಕ್ಕದ್ದು. ಮಾನ್ಯ ಮಂತ್ರಿಗಳು ತಂದಿರುವ ಇಂಗ್ಲೀಷ್ ಭಾಷಣದ ಕಾಪಿಯನ್ನು ತಮ್ಮ ಡಬ್ಬದಲ್ಲಿಯೇ ಇಟ್ಟು ಕನ್ನಡದಲ್ಲಿ ಮುದ್ರಿಸಿರುವುದನ್ನೇ ಓದಬೇಕು. ಅವರು ಓದುವುದರಲ್ಲಿ ಸ್ವಲ್ಪ ತಪ್ಪಾದರೂ ನಾವು ಸಹಿಸಿಕೊಳ್ಳುತ್ತೇವೆ, ಅವರಿಗೆ ಶಿಕ್ಷೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ—ಭಾಷಣದ ಹೊರತಾಗಿ ಬೇರೆ ಏನಾದರೂ ಹೇಳುವುದಿದ್ದರೆ, ಇಂಗ್ಲೀಷ್ ಅಥವಾ ಬೇರೆ ಭಾಷೆಯಲ್ಲಿ ಹೇಳಬಹುದು.

ಅಧ್ಯಕ್ಷರು—ಮಾನ್ಯ ಸದಸ್ಯರು ಎಷ್ಟು ಹೊತ್ತು ಚರ್ಚೆ ಮಾಡಿದರೂ ಅಷ್ಟೇ. ನಮಗೆಲ್ಲ ಕನ್ನಡದ ಬಗ್ಗೆ ಅಭಿಮಾನವಿರಬೇಕಾದ್ದು ಸೂಕ್ತ. ಆದರೆ ನಮ್ಮ ಅಭಿಮಾನ ಇನ್ನೊಂದು ಕಡೆಗೆ ಹೋಗಬಾರದು.

ಶ್ರೀ ಕಾಗೋಡು ತಿಮ್ಮಪ್ಪ—ಮಾನ್ಯ ಮುಖ್ಯ ಮಂತ್ರಿಗಳು ಪ್ರಾರಂಭದಲ್ಲಿಯೇ ನಮ್ಮ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಡುವುದರ ಮೂಲಕ ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾರೆ. ಅದೇ ರೀತಿ ಅರ್ಥ ಮಂತ್ರಿಗಳೂ ಕನ್ನಡದಲ್ಲಿಯೇ ಆಯವ್ಯಯವನ್ನು ಮಂಡಿಸಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್—"ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡಿಗನಾಗಿರು" ಎನ್ನುವಂತೆ ಕನ್ನಡವನ್ನು ಅಪವಿತ್ರ ಮಾಡುವುದಕ್ಕೆ ಹೋಗದೆ ಮಾನ್ಯ ಅರ್ಥ ಮಂತ್ರಿಗಳು ಕನ್ನಡದಲ್ಲಿಯೇ ಮಾತನಾಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು—ಎಷ್ಟು ಹೊತ್ತಾದರೂ ನೀವು ಅಷ್ಟೆ ಹೇಳುತ್ತೀರಿ, ನಾನು ಇಷ್ಟೇ ಹೇಳುತ್ತಿರುತ್ತೇನೆ.

ಶ್ರೀ ವಾಟಾಳ್ ನಾಗರಾಜ್—ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಓದುವಂತೆ ತಾವು ಸಲಹೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಅಧ್ಯಕ್ಷರು—ನಾನು ಯಾರನ್ನೂ ಬಲವಂತ ಮಾಡುವುದಕ್ಕಾಗುವುದಿಲ್ಲ. ಇಂಥ ಭಾಷೆಯಲ್ಲಿಯೇ ಮಾತನಾಡಬೇಕು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ವೈ. ಪಾಟೀಲ್—ನಮಗೆ ಸ್ವಂತ ತಾಯಿ ಇರಬೇಕಾದರೆ ಮತ್ತೊಬ್ಬ ತಾಯಿ ಏಕೆ ಬೇಕು? ನಮ್ಮದು ಕರ್ನಾಟಕ ರಾಜ್ಯ, ಕರ್ನಾಟಕದ ವಿಧಾನ ಸಭೆ. ಇಲ್ಲಿ ಕನ್ನಡ ನುಡಿಯಲ್ಲಿಯೇ ಮಾತನಾಡಬೇಕು ಎಂದು ನಮ್ರತೆಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಡಿ. ದೇವರಾಜಅರಸ್—ಮಾನ್ಯ ಸ್ನೇಹಿತರು ಕನ್ನಡದ ಬಗ್ಗೆ ಎಷ್ಟು ಅಭಿಮಾನ ಇಟ್ಟುಕೊಂಡಿದ್ದಾರೆ ಎನ್ನುವುದು ನಮಗೆಲ್ಲರಿಗೂ ಚೆನ್ನಾಗಿ ಗೊತ್ತಿದೆ. ನಮಗೆ ಎಷ್ಟು ಅಭಿಮಾನವಿಲ್ಲ ಎಂದು ಯಾರೂ ತಿಳಿದುಕೊಳ್ಳುವುದು ಬೇಡ. ಅವರಿಗಿಂತ ಹೆಚ್ಚಾಗಿ ಅಲ್ಲದೆ ಇದ್ದರೂ ಅವರಿಗಿರುವಷ್ಟೇ ಅಭಿಮಾನ ಕನ್ನಡದ ಬಗ್ಗೆ ನನಗೂ ಇದೆ. ದುರಭಿಮಾನ ಏನೂ ಇರಬೇಕಾದ ಅಗತ್ಯವಿಲ್ಲ. ಇಂಗ್ಲೀಷ್ ಭಾಷೆ ಕೂಡ ನಮ್ಮ ದೇಶದಲ್ಲಿ ಜಾರಿಯಲ್ಲಿದೆ. ಮಂತ್ರಿಗಳು ಓದುವುದಕ್ಕೆ ಪ್ರಾರಂಭ ಮಾಡಿ ಎಷ್ಟು ಸಾಧ್ಯವೊ ಅಷ್ಟನ್ನು ಕನ್ನಡದಲ್ಲಿ ಓದಿ ಆ ನಂತರ ಇಂಗ್ಲೀಷಿನಲ್ಲಿ ಮುಂದುವರಿಸಲಿ. ಕನ್ನಡ ಅಭಿಮಾನಿಗಳು ಕೂಡ ಎಷ್ಟೋ ಸಂದರ್ಭದಲ್ಲಿ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ. ಶ್ರೀ ವಾಟಾಳ್ ನಾಗರಾಜ್ ಅವರು ಕನ್ನಡಕ್ಕಾಗಿ ದುಡಿದಿದ್ದಾರೆ, ಈಗಲೂ ದುಡಿಯುತ್ತ ಇದ್ದಾರೆ, ಮುಂದೆಯೂ ದುಡಿಯುತ್ತಾರೆ. ಅವರ ದುಡಿಮೆಯನ್ನು ನಾನು ಮೆಚ್ಚಿದ್ದೇನೆ.

ಶ್ರೀ ವಾಟಾಳ್ ನಾಗರಾಜ್—ಇಷ್ಟೊಂದು ಹೊಗಳುವುದನ್ನು ನೋಡಿದರೆ ಏನೋ ಅಪಾಯವಿದೆ (ನಗು).

ಶ್ರೀ ಡಿ. ದೇವರಾಜ ಅರಸ್—ಅವರನ್ನು ಯಾವರೀತಿ ಒಲಿಸಿಕೊಳ್ಳಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಹೊಗಳುವುದರಿಂದ ಅವರು ಒಲಿಯುವುದಾದರೆ ಯಾವಾಗಲೂ ಹೊಗಳಬಹುದು. ದೇವಾದಿ ದೇವತೆಗಳೇ ಹೊಗಳಿಕೆಗೆ ಒಲಿಯುವಾಗ ಮಾನ್ಯ ನಾಗರಾಜ್ ಅವರು ಯಾಕೆ ಒಲಿಯುಬಾರದು?

MADAM SPEAKER—The Hon. Minister for Finance may present the Budget.

ಶ್ರೀ ಕೋಣಂದೂರು ಲಿಂಗಪ್ಪ—ಮಾನ್ಯ ಮುಖ್ಯ ಮಂತ್ರಿಗಳು ಕನ್ನಡದ ಬಗ್ಗೆ ದುರಭಿಮಾನವಿರಬಾರದು ಎಂದು ಹೇಳಿದರು ಆದರೆ ಅಧಿಕಾರ ಗದ್ದುಗೆಯಲ್ಲಿರುವವರಿಗೆ ನಿರಭಿಮಾನವಿರಬಾರದು.

ಶ್ರೀ ಎಂ. ವೈ. ಘೋರ್ಪಡೆ—ಮಾನ್ಯ ಸದ್ಯಸರು ಹೇಳಿದುದನ್ನೆಲ್ಲ ಶಾಂತವಾಗಿ ಕೇಳಿದ್ದೇನೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ನಾನು ಕನ್ನಡ ಭಾಷೆಯಲ್ಲಿ ಅಷ್ಟು ಹೆಚ್ಚಿನ ತರಪೇತಿ ಪಡೆಯಲಿಲ್ಲ. ಆದರೂ ಸಹ ಸಾಕಷ್ಟು ಈ ಸಭೆಯಲ್ಲಿ ಕನ್ನಡದಲ್ಲಿಯೇ ಮಾತನಾಡುವ ಪ್ರಯತ್ನ ಮಾಡುತ್ತಾ ಬಂದಿದ್ದೇನೆ. ಪ್ರತಿಯೊಂದು ಚರ್ಚೆಗೂ ಕನ್ನಡದಲ್ಲಿಯೇ ಉತ್ತರ ಕೊಡುವ ಪ್ರಯತ್ನವನ್ನು ಎಷ್ಟು ಸಾಧ್ಯವೋ ಅಷ್ಟು ಮಾಡಿದ್ದೇನೆ ಬಜೆಟ್ ಭಾಷಣವೇನಿದೆ ಅದನ್ನು ಇಂಗ್ಲೀಷಿನಲ್ಲಿ ಓದಬೇಕಾಗುತ್ತದೆ. ಬಹಳ ಟೆಕ್ನಿಕಲ್ ಪದಗಳಿರುವುದರಿಂದ ಇಂಗ್ಲೀಷಿನಲ್ಲಿ ಓದುವಅಭ್ಯಾಸವಿರುವುದರಿಂದ ಇಂಗ್ಲೀಷಿನಲ್ಲಿ ಓದಬೇಕಾಗುತ್ತದೆ. ಹಾಗೆ ಮಾಡಿದ ತಕ್ಷಣ ಕನ್ನಡಕ್ಕೆ ಅಗೌರವ ಮಾಡುವ ಉದ್ದೇಶದಿಂದ ಅಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ಸಂಪ್ರದಾಯದ ಪ್ರಕಾರ, ಕನ್ನಡಕ್ಕೆ ಅಗೌರವ ತೋರಿಸುವ ದೃಷ್ಟಿಯಿಂದ ಕನ್ನಡದಲ್ಲಿ ಪ್ರಾರಂಭಿಸಿ ಆ ನಂತರ ಇಂಗ್ಲೀಷಿನಲ್ಲಿ ನಾನು ಓದಿದರೆ ಅದೇನೂ ತಪ್ಪಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಸಹಕಾರ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎಸ್. ವೈ. ಪಾಟೀಲ್—ಕನ್ನಡದಲ್ಲಿ ಪ್ರಾರಂಭ ಮಾಡಿ ಇಂಗ್ಲೀಷಿನಲ್ಲಿ ಮುಂದುವರಿಸುವ ಬದಲು ಪೂರ್ತಿ ಇಂಗ್ಲೀಷಿನಲ್ಲಿಯೇ ಓದಬಹುದಲ್ಲ.

ಶ್ರೀ ಕೋಣಂದೂರು ಲಿಂಗಪ್ಪ—ಟೆಕ್ನಿಕಲ್ ಪದಗಳು ಬಂದಾಗ ಅವುಗಳನ್ನು ಇಂಗ್ಲೀಷಿನಲ್ಲಿಯೇ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್—ಕನ್ನಡದಲ್ಲಿ ಓದುವವರೆಗೂ ನಾನು ಕೇಳುತ್ತಿರುತ್ತೇನೆ. ಇಂಗ್ಲೀಷಿನಲ್ಲಿ ಪ್ರಾರಂಭ ಮಾಡಿದಾಗ ಅದರ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿ ನಾನು ಹೊರಗೆ ಹೋಗಬೇಕಾಗುತ್ತದೆ ಎನ್ನುವ ಮಾತನ್ನು ಮೊದಲೇ ತಿಳಿಸುತ್ತಿದ್ದೇನೆ.

(ಸಭೆಯಲ್ಲಿ ಕರತಾಡನ)

ಕನ್ನಡ ವಿರೋಧಿಗಳೆಲ್ಲ ಕೈ ಚಪ್ಪಾಳೆ ಹೊಡೆಯುತ್ತಿದ್ದಾರೆ.